# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಎಂವೈಎಸ್/9153/2017/ಪಿಪಿ ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು,
ದಿನಾಂಕ: 23/12/2020.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ

ವಿಷಯ: ಶ್ರೀ ಸುಭಾಸ್ ಖಾರ್ವಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಐರೋಡಿ ಗ್ರಾಮ ಪಂಚಾಯತ್ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಕುರಿತು ವರದಿ.

*****

1. ಶ್ರೀ ಡೆನ್ನಿಸ್ ಡಿಸೋಜ಼ಾ ಬಿನ್ ಪೌಲ್ ಡಿಸೋಜ಼ಾ, ಅಂಬೇಡ್ಕರ್ ರಸ್ತೆ, ಬಾಳ್ಕುದ್ರು ಗ್ರಾಮ, ಹಂಗಾರಕಟ್ಟೆ ಅಂಚೆ, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ ಇವರು (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಈ ದೂರನ್ನು (1) ಶ್ರೀ ಸುಭಾಸ್ ಖಾರ್ವಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಐರೋಡಿ ಗ್ರಾಮ ಪಂಚಾಯತ್, (2) ಶ್ರೀಮತಿ ಪೂರ್ಣಿಮ ಅಧಿಕಾರಿ, ಲೆಕ್ಕಾಧಿಕಾರಿ, ಐರೋಡಿ ಗ್ರಾಮ ಪಂಚಾಯತ್ ಮತ್ತು (3) ಶ್ರೀ ಮೋಸೆಸ್ ರೊಡ್ರಿಗಸ್, ಅಧ್ಯಕ್ಷರು, ಐರೋಡಿ ಗ್ರಾಮ ಪಂಚಾಯತ್, ಉಡುಪಿ ತಾಲ್ಲೂಕು ಮತ್ತು ಜಿಲ್ಲೆ (ಇವರು ಖಾಸಗಿ ವ್ಯಕ್ತಿಯಾಗಿರುತ್ತಾರೆ) (ಇನ್ನು ಮುಂದೆ '1 ರಿಂದ 3ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರುಗಳ ವಿರುದ್ಧ ಸಲ್ಲಿಸಿ ಸೂಕ್ತ ಕ್ರಮ ಜರುಗಿಸಲು ಕೋರಿರುತ್ತಾರೆ.

2. ದೂರಿನ ಸಂಕ್ಷಿಪ್ತ ಸಾರಾಂಶ:

ಉಡುಪಿ ತಾಲ್ಲೂಕಿನ 5ನೇ ಐರೋಡಿ ಗ್ರಾಮ ಪಂಚಾಯತ್‌ನಲ್ಲಿ 13ನೇ ಹಣಕಾಸು ಯೋಜನೆಯ ರೂ. 5 ಲಕ್ಷ ಅನುದಾನವನ್ನು ದುರುದ್ದೇಶದಿಂದ ಗ್ರಾಮ ಪಂಚಾಯತಿಯ ವರ್ಗ-1ರ ಖಾತೆಗೆ ದಿನಾಂಕ: 31/03/2017ಕ್ಕೆ ವರ್ಗಾವಣೆಯನ್ನು ಮಾಡಿಕೊಂಡಿರುತ್ತಾರೆ. ದಿನಾಂಕ: 31/03/2017ರಲ್ಲಿ ವರ್ಗ-1 ರಲ್ಲಿ ರೂ.66,651/-

ಜಮೆ ಇದ್ದು ವರ್ಗ-1ರಲ್ಲಿ ಅನುಷ್ಠಾನಗೊಂಡ ಕಾಮಗಾರಿಗಳ ಪಾವತಿಯನ್ನು ಮಾಡಲು ಹಣದ ಅವಶ್ಯಕತೆ ಇದ್ದುದರಿಂದ ಅದೇ ದಿನಾಂಕದಂದು ರೂ.1,38,045/- ಮತ್ತು ಇತರ ವರ್ಗ-1ರ ಖರ್ಚುಗಳನ್ನು ಮಾಡಿದ್ದು ಇದು ಗ್ರಾಮ ಪಂಚಾಯತಿಯ ಕಾನೂನಿಗೆ ವಿರುಧ್ಧವಾಗಿದ್ದು ಉದ್ದೇಶ ಪೂರ್ವಕವಾಗಿ ಹಣದ ದುರುಪಯೋಗ ಮಾಡಿರುವುದು ಕಂಡುಬರುತ್ತದೆ. ಕೇಂದ್ರ ಸರ್ಕಾರದ ಯೋಜನೆಯನ್ನು ನಿರ್ಲಕ್ಷವಹಿಸಿ ವರ್ಷದ ಕೊನೆಯಲ್ಲಿ ಹಣವನ್ನು ಉಳಿಸಿಕೊಂಡು ಸದರಿ ಹಣವನ್ನು ಬೇರೆ ಉದ್ದೇಶಕ್ಕೋಸ್ಕರ ಬಳಸಿಕೊಂಡಿರುವುದು ಭ್ರಷ್ಟಾಚಾರದ ದ್ಯೋತಕವಾಗಿರುತ್ತದೆ. ಎದುರುದಾರರ ವಿರುಧ್ಧ ಸೂಕ್ತ ಕ್ರಮ ತೆಗೆದುಕೊಳ್ಳಬೇಕಾಗಿ ಕೋರಿರುತ್ತಾರೆ. ದೂರಿನೊಂದಿಗೆ ಬ್ಯಾಂಕ್ ಖಾತೆಯ ಪ್ರತಿಯನ್ನು ಹಾಗೂ ನಗದು ಪುಸ್ತಕದ ಪ್ರತಿಯನ್ನು ಹಾಜರುಪಡಿಸಿರುತ್ತಾರೆ.

3. 1 ರಿಂದ 3ನೇ ಎದುರುದಾರರು ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ. ಸದರಿ ಆಕ್ಷೇಪಣೆಯಲ್ಲಿ ಗ್ರಾಮ ಪಂಚಾಯತ್ ನಿಂದ ಯಾವುದೇ ಅವ್ಯವಹಾರವಾಗಲೀ, ಹಣದ ದುರುಪಯೋಗವಾಗಲೀ ಅಗಿರುವುದಿಲ್ಲ. 2016-17ನೇ ಸಾಲಿನ ಗ್ರಾಮ ಪಂಚಾಯತ್‌ನ ಕ್ರಿಯಾ ಯೋಜನೆಯಡಿ ಸಂಪೂರ್ಣಗೊಂಡಿರುವ ಕಾಮಗಾರಿಗಳ ಬಾಬ್ತು ಗ್ರಾಮ ಪಂಚಾಯತ್ ಪಾವತಿಸಬೇಕಾದ ಹಣವನ್ನು ಈ ಯೋಜನೆಯಡಿ ಸರ್ಕಾರ ಸೂಕ್ತ ಸಮಯದಲ್ಲಿ ಹಣ ಬಿಡುಗಡೆ ಮಾಡದ ಕಾರಣ, ಗುತ್ತಿಗೆದಾರರು ಹಣ ಪಾವತಿಗೆ ಒತ್ತಡ ಹೇರುತ್ತಿರುವುದರಿಂದ, ದಿನಾಂಕ: 24/03/2017 ರಂದು ಗ್ರಾಮ ಪಂಚಾಯತ್ ಸಭೆ ಸೇರಿ 16 ಸದಸ್ಯರ ಸಮ್ಮುಖದಲ್ಲಿ, ಕೈಗೊಂಡ ನಿರ್ಣಯ ಸಂಖ್ಯೆ; 6 ರಂತೆ, 13ನೇ ಹಣಕಾಸಿನ ಖಾತೆಯಿಂದ ಅಗತ್ಯವಿರುವಷ್ಟು ಹಣವನ್ನು ಮಾತ್ರ ವರ್ಗ-1ರ ಖಾತೆಗೆ ವರ್ಗಾಯಿಸಲು ನಿರ್ಣಯಿಸಲಾಗಿರುತ್ತದೆ. ಅದರಂತೆ ಹಣವನ್ನು ವರ್ಗಾಯಿಸಿ ಆ ಹಣವನ್ನು ಕ್ರಿಯಾ ಯೋಜನೆಯಡಿ ಗುತ್ತಿಗೆದಾರರಿಗೆ ಪಾವತಿಸಲು ತಾಲ್ಲೂಕು ಪಂಚಾಯತಿಗೆ ಅನುಮತಿ ಕೋರಿ ಪತ್ರ ಬರೆಯಲಾಗಿದೆ. ಕ್ರಿಯಾ ಯೋಜನೆಗೆ ಸಂಬಂಧಪಟ್ಟ ಹಣ ಬಂದ ಕೂಡಲೇ ಅದನ್ನು 13ನೇ ಹಣಕಾಸು ಖಾತೆಗೆ ಜಮೆ ಮಾಡಲಾಗಿದೆ. ಜಿಲ್ಲಾ ಪಂಚಾಯತ್‌ನಿಂದ ಬಂದ ಜ್ಞಾಪನಾ ಪತ್ರವನ್ನು

ಲಗತ್ತಿಸಿರುತ್ತೇವೆ. ದಾಖಲೆಗಳ ಮೂಲಕ ಸದುದ್ದೇಶಕ್ಕಾಗಿ ಹಣವನ್ನು ಉಪಯೋಗಿಸಿದ್ದೇ ಹೊರತು ದೂರುದಾರರು ಆಪಾದಿಸುವಂತೆ ಯಾವುದೇ ರೀತಿಯಲ್ಲಿ ಹಣದ ದುರುಪಯೋಗ ಆಗಿರುವುದಿಲ್ಲ. ಗ್ರಾಮದ ಅಭಿವೃದ್ಧಿಯ ದೃಷ್ಟಿಯಿಂದ, ಪಂಚಾಯತ್ ಕಾಮಗಾರಿಗಳಿಗೆ ತೊಂದರೆ/ತಡೆ ಉಂಟಾಗಕೂಡದೆಂಬ ಉದ್ದೇಶದಿಂದ ಅನಿವಾರ್ಯ ಪರಿಸ್ಥಿತಿಯಲ್ಲಿ ಆ ರೀತಿ ಹಣವನ್ನು ಒಂದು ಖಾತೆಯಿಂದ ಇನ್ನೊಂದು ಖಾತೆಗೆ ವರ್ಗಾಯಿಸಿದ್ದೇ ಹೊರತು ಯಾವುದೇ ಅವ್ಯವಹಾರಕ್ಕಲ್ಲ. ಈ ರೀತಿ ಸುಳ್ಳು ದೂರು ಅರ್ಜಿಗಳನ್ನು ಬರೆಯುವ ದೂರುದಾರರ ಕೆಟ್ಟ ಚಾಳಿಗೆ ಬೇಸತ್ತ ಗ್ರಾಮ ಪಂಚಾಯತ್ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಹಮ್ಮಿಕೊಳ್ಳಲು ಹಿಂದೇಟು ಹಾಕುವ ಪರಿಸ್ಥಿತಿ ಉಂಟಾಗಿದೆ ಎಂದು ನಮೂದಿಸಿರುತ್ತಾರೆ.

4. ಪಂಚಾಯತಿಯ 10ನೇ ಸಾಮಾನ್ಯ ಸಭೆಯ ನಡಾವಳಿ ಪ್ರತಿ, ವರ್ಗ-1ರ ಖಾತೆಗೆ ಹಣ ವರ್ಗಾಯಿಸಲು ಅನುಮತಿ ನೀಡಲು ಕೋರಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಬರೆದ ಪತ್ರದ ಪ್ರತಿ, ಅಧಿಕೃತ ಜ್ಞಾಪನಾ ಪತ್ರದ ಪ್ರತಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗೆ ಹಣ ಉಪಯೋಗಿಸಿಕೊಳ್ಳಲು ಅನುಮತಿ ಕೋರಿ ಬರೆದ ಪತ್ರದ ಪ್ರತಿಗಳನ್ನು ಸಲ್ಲಿಸಿರುತ್ತಾರೆ.

5. 2ನೇ ಎದುರುದಾರರು ತಮ್ಮ ಮುಂದುವರೆದ ಆಕ್ಷೇಪಣೆಗಳನ್ನು ಸಲ್ಲಿಸಿದ್ದು, ಸದರಿ ಆಕ್ಷೇಪಣೆಯಲ್ಲಿ ಐರೋಡಿ ಗ್ರಾಮ ಪಂಚಾಯತ್‌ಗೆ 2012ರ ಆಗಸ್ಟ್ 25ರ ಉಡುಪಿ ಜಿಲ್ಲಾ ಪಂಚಾಯತಿಯ ನೇಮಕಾತಿ ಆದೇಶದಂತೆ ಲೆಕ್ಕ ಸಹಾಯಕಳಾಗಿ ನೇಮಕಗೊಂಡಿದ್ದು, ಅಭಿವೃದ್ಧಿ ಅಧಿಕಾರಿಗಳಿಗೆ ಅವರು ಸೂಚಿಸಿದಂತೆ ಕಛೇರಿಯ ಲೆಕ್ಕಪತ್ರಗಳ ನಿರ್ವಹಣೆಯಲ್ಲಿ ಸಹಕರಿಸುವ ಕೆಲಸವನ್ನು ತಾನು ನಿರ್ವಹಿಸುವುದಾಗಿರುತ್ತದೆ. ತನ್ನದು ಗುಮಾಸ್ತ ಮಾದರಿ ಕೆಲಸವೇ ಹೊರತು ಯಾವುದೇ ಆಡಳಿತಾತ್ಮಕ ನಿರ್ಧಾರ ಕೈಗೊಳ್ಳುವ ಹಾಗೂ ಬಿಲ್ ಮತ್ತು ಇತರೆ ಕಡತಗಳಿಗೆ ಸಹಿ ಹಾಕುವ ಅಧಿಕಾರವನ್ನು ಸರ್ಕಾರವು ಈವರೆಗೆ ನೀಡಿರುವುದಿಲ್ಲ. ಈ ಅನುದಾನವು ಕೇಂದ್ರ ಸರ್ಕಾರವು ನಿರ್ದಿಷ್ಟ ಯೋಜನೆಯ ಬಳಕೆಗಾಗಿ ನೀಡುತ್ತಿದ್ದು,

ಅದರ ವರ್ಗಾವಣೆ ಮಾಡುವುದಾಗಿದ್ದರೇ, ಅದಕ್ಕೆ ತಾಲ್ಲೂಕು ಪಂಚಾಯತ್ ಅಥವಾ ಜಿಲ್ಲಾ ಪಂಚಾಯತ್‌ನ ಅನುಮತಿ ಪಡೆಯಬೇಕಾಗುತ್ತದೆ ಎಂದು ಮೌಖಿಕವಾಗಿ ತಿಳಿಸಿದ್ದು, ಬಿಲ್‌ನಲ್ಲಿ ಟಿಪ್ಪಣಿ ಕೂಡಾ ಹಾಕಿದ್ದು, ಮೇಲಾಧಿಕಾರಿಗಳು ಸೂಚಿಸಿದಂತೆ ಕಾರ್ಯನಿರ್ವಹಿಸಬೇಕಾಗಿರುವುದು ಅನಿವಾರ್ಯವಾಗಿರುವುದರಿಂದ ಆ ರೀತಿ ತನ್ನ ಟಿಪ್ಪಣಿಯನ್ನು ದಾಖಲಿಸಿ ಬಿಲ್ ತಯಾರಿಸಿ, ಮಂಜೂರಾತಿಗೆ ಅವರಿಗೆ ನೀಡಿರುತ್ತೇನೆ ಎಂದು ನಮೂದಿಸಿರುತ್ತಾರೆ.

6. <u>ಪಿರ್ಯಾದುದಾರರ ಪ್ರತ್ಯುತ್ತರ :</u>

ಸರ್ಕಾರದ ಯಾವುದೇ ಸುತ್ತೋಲೆಗಳಿಲ್ಲದೆ ಯೋಜನೆಯ ಹಣಗಳನ್ನು ಪಂಚಾಯತಿನ ನಿಧಿಗೆ (ವರ್ಗ 1ರ ಖಾತೆಗೆ) ವರ್ಗಾವಣೆ ಮಾಡಿಕೊಂಡು ಬಳಸಿಕೊಂಡಿರುವುದು ನಿಯಮಗಳ ವಿರುದ್ಧವಾಗಿರುವುದರಿಂದ ಪಂಚಾಯತ್ ಆರ್ಥಿಕ ಶಿಸ್ತು ಪಾಲನೆ ಮಾಡದಿರುವುದು ಕಂಡುಬರುತ್ತದೆ. ತಾಲ್ಲೂಕು ಪಂಚಾಯತಿನಿಂದ ನೀಡಿರುವ ಅನುಮತಿ ಪತ್ರವನ್ನು ಲಗತ್ತಿಸಿರುವುದಿಲ್ಲ. ಎದುರುದಾರರು ಹಾಜರುಪಡಿಸಿರುವ ದಾಖಲೆಗಳಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳ ಯಾವುದೇ ಸಹಿ ಇರುವುದಿಲ್ಲ. ಸರ್ಕಾರದ ಯಾವ ಯೋಜನೆ ಅಡಿಯಲ್ಲಿ ವರ್ಗ 1ಕ್ಕೆ ಹಣ ಬರುವುದು ಬಾಕಿಯಿದೆ ಎಂದು ದಾಖಲೆಗಳನ್ನು ಒದಗಿಸಿಲ್ಲ. ಆದರೆ 2016/17ರ ಲೆಕ್ಕ ಪರಿಶೋಧನ ವರದಿಯಲ್ಲಿ ಸರ್ಕಾರದ ಅನುದಾನ ಬಾಕಿಯಾಗಿರುವ ಬಗ್ಗೆ ಎಲ್ಲೂ ತಿಳಿಸಿಲ್ಲ ಹಾಗೂ ಅನುದಾನ ಬಂದಿರುವ ಬಗ್ಗೆ ಉಲ್ಲೇಖಿಸಿರುತ್ತಾರೆ.

7. ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ ಲೆಕ್ಕಾಧಿಕಾರಿಗಳು ಹಾಗೂ ಅಧ್ಯಕ್ಷರ ಮೇಲೆ ಭ್ರಷ್ಟಾಚಾರ ನಿಗ್ರಹದಳ (ಎ.ಸಿ.ಬಿ.) ಉಡುಪಿಯವರು ಈಗಾಗಲೇ ಕುಂದಾಪುರ ವಿಶೇಷ ಜಿಲ್ಲಾ ಹಾಗೂ ಸತ್ರ ನ್ಯಾಯಾಲಯದಲ್ಲಿ 2 ಭ್ರಷ್ಟಾಚಾರ ಪ್ರಕರಣಗಳನ್ನು ದಾಖಲಿಸಿರುತ್ತಾರೆ. ಸರ್ಕಾರದ 13ನೇ ಹಣಕಾಸು ಯೋಜನೆ ಕೊನೆಗೊಳ್ಳುವುದನ್ನು ಮನಗೊಂಡ ಪಂಚಾಯತಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಹಾಗೂ

ಅಧ್ಯಕ್ಷರು, ಲೆಕ್ಕಾಧಿಕಾರಿಗಳು ಸೇರಿಕೊಂಡು ಕಾಮಗಾರಿಗೆ ಬಳಕೆ ಮಾಡದೇ ಸರ್ಕಾರಕ್ಕೆ ಮರುಪಾವತಿ ಮಾಡಬೇಕಾದ ಉಳಿದ ಹಣವನ್ನು ಬೇರೆ ಖಾತೆಗಳಿಗೆ ವರ್ಗಾವಣೆ ಮಾಡಿಕೊಂಡು, ಉಳಿಕೆ ಹಣವನ್ನು ಕಡಿಮೆ ಮಾಡಿ ಸರ್ಕಾರಕ್ಕೆ ತಿಳಿಯಪಡಿಸಿರುವುದು ಕರ್ತವ್ಯ ಲೋಪವಾಗಿದೆ. ಪಂಚಾಯತಿಯ ನಿರ್ಣಯದ ಪ್ರತಿಯನ್ನು ಎದುರುದಾರರು ಮಂಡಿಸಿದ್ದು, ನಿರ್ಣಯದಲ್ಲಿ ಯಾವುದೇ ಸದಸ್ಯರು ಪರ ಹಾಗೂ ವಿರೋಧ ಬರೆದಿರುವುದು ಕಂಡು ಬಂದಿರುವುದಿಲ್ಲ ಹಾಗೂ ಯಾವುದೇ ಪಂಚಾಯತಿನ ಸದಸ್ಯರುಗಳ ಸಹಿ ಕೂಡ ಪಡೆದುಕೊಂಡಿರುವುದು ಕಂಡುಬರುವುದಿಲ್ಲ.

8. 2016-17ನೇ ವರ್ಷದಲ್ಲಿ ದಿನಾಂಕ: 31/03/2017ರ ಅಂತ್ಯಕ್ಕೆ 5ನೇ ಐರೋಡಿ ಪಂಚಾಯತಿಯಲ್ಲಿ ಒಟ್ಟು ರೂ.1,10,94,951/- ಅನುದಾನ ವಿನಿಯೋಗವಾಗದೆ ಇರುವುದನ್ನು ಲೆಕ್ಕಪರಿಶೋಧಕರು ತಮ್ಮ ಲೆಕ್ಕ ಪರಿಶೋಧನಾ ವರದಿಯಲ್ಲಿ ನಮೂದಿಸಿರುತ್ತಾರೆ. ಹಾಗೂ ಅನುದಾನ ವ್ಯವಹಾರಗಳನ್ನು ನಿಯಮ 99ರಲ್ಲಿ ಹೇಳಲಾಗಿರುವಂತೆ ನಮೂನೆ 45ರಲ್ಲಿ ನಿರ್ವಹಿಸಿರುವುದಿಲ್ಲ ಅಂತ ವರದಿ ನೀಡಿರುತ್ತಾರೆ. 2016-17ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯಲ್ಲಿ 5ನೇ ಐರೋಡಿ ಗ್ರಾಮ ಪಂಚಾಯಿತಿಯಲ್ಲಿ 31/03/2017ರ ಅಂತ್ಯಕ್ಕೆ ರೂ.3,26,14,831/- ಗಳ ಮೊಬಲಗು ಆಕ್ಷೇಪಣೆ ಮೊತ್ತವಾಗಿಯೂ ಹಾಗೂ ರೂ.1,38,605/- ವಸೂಲಾತಿ ಮಾಡಬೇಕಾಗಿರುವುದಾಗಿ ಸ್ಪಷ್ಟವಾಗಿ ನಮೂದಿಸಿರುತ್ತಾರೆ. ತಪ್ಪಿತಸ್ತರ ವಿರುದ್ಧ ಕಾನೂನು ಕ್ರಮ ಜರುಗಿಸಲು ಕೋರಿರುತ್ತಾರೆ.

9. ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಐರೋಡಿ ಗ್ರಾಮ ಪಂಚಾಯತಿಯ 2016-17ನೇ ಸಾಲಿನ ಲೆಕ್ಕ ಪರಿಶೋಧನೆ ವರದಿಯ ಪ್ರತಿಯನ್ನು ಸಲ್ಲಿಸಿದ್ದು ಸದರಿ ವರದಿಯಲ್ಲಿ ಕರ್ನಾಟಕ ಪಂಚಾಯತ್ ರಾಜ್ ನಿಯಮಗಳೂ 2006ರ ನಿಯಮ 104 ಮತ್ತು ಕರ್ನಾಟಕ ಆರ್ಥಿಕ ಸಂಹಿತೆಯ ಅನುಚ್ಛೇದ 327(1) ರಲ್ಲಿ ಹೇಳಲಾಗಿರುವಂತೆ ಪ್ರತಿ ದಿನದ ಅಂತ್ಯಕ್ಕೆ ಕಛೇರಿ ನಗದು ಪುಸ್ತಕದಲ್ಲಿ ನಗದು ಶಿಲ್ಕಿನ ಭೌತಿಕ ಪರಿಶೀಲನೆ

ನಡೆಸಿದ ಬಗ್ಗೆ ದೃಢೀಕರಿಸಿದ ವಿವರ ದಾಖಲಿಸಿಲ್ಲ. ನಿಯಮ 107 ರಂತೆ ಅಂತಿಮ ಶಿಲ್ಕನ್ನು ತಾಳೆ ಮಾಡಿ ದೃಢೀಕರಿಸಿರುವುದಿಲ್ಲ. ನಿಯಮ 89 ಹಾಗೂ ಆರ್ಥಿಕ ಸಂಹಿತೆಯಲ್ಲಿ ಹೇಳಲಾಗಿರುವಂತೆ ಭದ್ರತಾ ಠೇವಣಿಯನ್ನು ಗುತ್ತಿಗೆದಾರರಿಂದ ಹಾಗೂ ನಗದು ವ್ಯವಹಾರ ನಡೆಸುವವರಿಂದ ಪಡೆದಿರುವುದಿಲ್ಲ. ರೂ.50ಕ್ಕೆ ಮೇಲ್ಪಟ್ಟ ಮೊಬಲಗನ್ನು ಚೆಕ್ ಮೂಲಕ ಪಾವತಿಸಿರುವುದಿಲ್ಲ. ನಿರ್ದಿಷ್ಟ ಉದ್ದೇಶಕ್ಕೆ ಬಿಡುಗಡೆಯಾಗಿರುವ ಅನುದಾನಗಳ ವಿವರವನ್ನು ಅನುದಾನದ ವಹಿಯಲ್ಲಿ ದಾಖಲಿಸಿ ಬಾಕಿ ಶಿಲ್ಕನ್ನು ನಮೂದಿಸಿರುವುದಿಲ್ಲ. ಬಿಲ್ಲು ಮತ್ತು ವೋಚರ್‌ಗಳನ್ನು ತಯಾರಿಸುವಾಗ ನಿರ್ದೇಶನಗಳನ್ನು ಪಾಲಿಸಿರುವುದಿಲ್ಲ. ಅನುದಾನ ಬಿಡುಗಡೆಯ ಆದೇಶ ಪತ್ರಗಳನ್ನು ಲೆಕ್ಕ ಪರಿಶೋಧನೆಗೆ ಒದಗಿಸಿರುವುದಿಲ್ಲ. ಸಾದಿಲ್ವಾರು ವೆಚ್ಚಗಳ ಬಗ್ಗೆ ನಿಯಮಗಳಂತೆ ಎಲ್ಲಾ ಕ್ರಮ ಕೈಗೊಂಡಿರುವುದಿಲ್ಲ. ಕಾಮಗಾರಿ ಬಿಲ್ಲುಗಳ ಬಗ್ಗೆ ನಿಯಮದಂತೆ ಕ್ರಮ ಕೈಗೊಂಡಿರುವುದಿಲ್ಲ. ಬ್ಯಾಂಕ್ ಖಾತೆ ಪ್ರಾರಂಭಿಸಿದ ಹಾಗೂ ಚೆಕ್ ಪುಸ್ತಕ ಪಡೆದಿರುವ ವಿವರಗಳನ್ನು ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಒದಗಿಸಿಲ್ಲ ಎಂದು ನ್ಯೂನತೆಗಳನ್ನು ಸಲ್ಲಿಸಿರುತ್ತಾರೆ. ಸದರಿ ಅವಧಿಯಲ್ಲಿ 1ನೇ ಎದುರುದಾರರು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಎಂದು, 3ನೇ ಎದುರುದಾರರು ಅಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸಿರುವುದಾಗಿ ವರದಿಯಲ್ಲಿ ನಮೂದಿಸಿರುತ್ತಾರೆ. ಎದುರುದಾರರು ಗ್ರಾಮ ಪಂಚಾಯತಿಯಲ್ಲಿ ಲೆಕ್ಕ ಪತ್ರ ನಿರ್ವಹಣೆಯಲ್ಲಿ ಅಗತ್ಯ ಕ್ರಮ ವಹಿಸುವ ಅಧಿಕಾರಿ/ನೌಕರರಿದ್ದು ಕರ್ತವ್ಯವನ್ನು ನಿರ್ವಹಿಸದೆ ನಿರ್ಲಕ್ಷ್ಯತೆ ತೋರಿರುವುದು ತನಿಖೆಯಲ್ಲಿ ಕಂಡುಬಂದಿರುತ್ತದೆ.

10. ಸದರಿ ಲೆಕ್ಕ ಪರಿಶೋಧಕರ ವರದಿಯನ್ನು ಪರಿಶೀಲಿಸಿದಾಗ ಅನೇಕ ರೀತಿಯ ಅಸಮತೋಲನ ಉಂಟಾಗಿರುವುದು ಕಂಡು ಬರುತ್ತದೆ. ನಗದು ಪುಸ್ತಕ ಪರಿಶೀಲಿಸಿದಾಗ ದಿನದ ಆರ್ಥಿಕ ವಹಿವಾಟುಗಳ ನಮೂದುಗಳು ಸ್ಪಷ್ಟವಾಗಿರುವುದಿಲ್ಲ. ಜನರಲ್ ಪುಸ್ತಕವನ್ನು ನಮೂನೆ-50 ರಲ್ಲಿ ನಿರ್ವಹಿಸಿರುವುದಿಲ್ಲ. ಈ ಕುರಿತು ಕರ್ನಾಟಕ ಪಂಚಾಯತ್ ರಾಜ್( ಗ್ರಾಮ

ಪಂಚಾಯತ್ ಅಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಾವಳ 2006 ರ ನಿಯಮ 106ರ ಹೇಳಲಾಗಿರುವಂತೆ ನಿರ್ವಹಿಸಿರುವುದಿಲ್ಲ. ಸಾಮಾನ್ಯ ಲೆಡ್ಜರ್ ಕ್ರಮಬದ್ಧವಾಗಿ ನಿರ್ವಹಿಸಿಲ್ಲ. ಸ್ವೀಕೃತಿ ಮತ್ತು ಪಾವತಿ ಲೆಕ್ಕಗಳ ಸಂಬಂಧ ನಮೂನೆ-53 ರಲ್ಲಿ ಹೇಳಲಾದ ಸ್ವೀಕೃತಿ ಪಾವತಿಯು ವ್ಯತ್ಯಾಸ ಕಂಡುಬರುತ್ತದೆ. ಸ್ವೀಕೃತಿಯು 1,43,44,441 ಇದ್ದು ಪಾವತಿಗಳು 91,53,413 ಎಂದು ಇರುತ್ತದೆ. ಅಂತಿಮ ಶಿಲ್ಕು 1,18,33,341 ಎಂದು ಇರುತ್ತದೆ. ಇವುಗಳನ್ನು ಗಮನಿಸಿದ್ದಲ್ಲಿ ವ್ಯತ್ಯಾಸವು ಮೇಲ್ನೋಟಕ್ಕೆ ಕಂಡುಬರುತ್ತದೆ.

11. ಆದಾಯ ಮತ್ತು ಖರ್ಚುಗಳು ತೆರಿಗೆ ಮೂಲಗಳಿಂದ ಸಂಗ್ರಹಿಸಿರುವ ಮೊತ್ತವನ್ನು ಆದಾಯ ಮತ್ತು ಖರ್ಚಿನ ತ:ಖ್ತೆಯಲ್ಲಿ ಸಮರ್ಪಕವಾಗಿ ಲೆಕ್ಕಿಕರಿಸದೇ ಇರುವುದು ಕಂಡುಬರುತ್ತದೆ. ಕಂಡಿಕೆ 31(3)ರ ಲೆಕ್ಕ ಪರಿಶೋಧನಾ ವರದಿಯಲ್ಲಿ ತಿಳಿಸಿರುವಂತೆ 2016-17 ನೇ ಸಾಲಿನಲ್ಲಿ ಆರ್ಥಿಕ ಪರಿಸ್ಥಿತಿ ಕುರಿತು ನಮೂದಿಸಿದ್ದು ಅದರನ್ವಯ ಒಟ್ಟು ಜಮೆಗಳು 15,70,279 ಇದ್ದು ಪ್ರಾರಂಭದ ಶಿಲ್ಕು ಸೇರಿ 16,33,269 ಆಗಿರುತ್ತದೆ. ಒಟ್ಟು ಖರ್ಚುಗಳು 14,18,152 ಎಂದು ಬ್ಯಾಂಕ್ ಖಾತೆಯಲ್ಲಿ ಅಂತಿಮ ಶಿಲ್ಕು 2,15,117 ಇರುವುದು ದಾಖಲೆಯಿಂದ ಕಂಡುಬರುತ್ತದೆ.

12. ಈ ಅಂಶದ ಮೇಲಿನಿಂದ ಗ್ರಾಮ ಪಂಚಾಯತ್ ಅನುದಾನದಲ್ಲಿ ಉಳಿಕೆ ಕಂಡುಬಂದಿದ್ದು, ವರ್ಗ-1ರ ಕಾಮಗಾರಿ ನಡೆದು ಬಾಕಿ ಇದ್ದಲ್ಲಿ ಪಂಚಾಯತಿನ ಉಳಿದ ಶಿಲ್ಕು ಅದರ ಮುಖಾಂತರ ಪಾವತಿಸಬಹುದಾಗಿರುತ್ತದೆ. ಆದರೆ, ಕೇಂದ್ರ ಸರ್ಕಾರದ ಹಣ ಉಳಿಕೆ ಆದನಂತರ ಅದನ್ನು ಹಿಂತಿರುಗಿಸದೇ ವರ್ಗ-1 ಕ್ಕೆ ಹಣವನ್ನು ವರ್ಗಾವಣೆ ಮಾಡಿಕೊಂಡಿರುವುದು ದಾಖಲೆಗಳಿಂದ ಕಂಡುಬರುತ್ತದೆ. 2016-17ನೇ ಸಾಲಿನ ಲೆಕ್ಕ ಪರಿಶೋಧನೆಯಲ್ಲಿ 5ನೇ ಐರೋಡಿ ಗ್ರಾಮ ಪಂಚಾಯತ್, 31/3/2017ರ ಅಂತ್ಯಕ್ಕೆ 3,26,14,831 ಮೊಬಲಗು ಆಕ್ಷೇಪಣೆ

ಮೊತ್ತವೆಂದು ಹಾಗೂ ರೂ. 1.38.605 ವಸೂಲಾತಿ ಮಾಡಬೇಕಾಗಿರುವುದು ಎಂದು ನಮೂದಿಸಿರುತ್ತಾರೆ.

13. ಪ್ರಸಕ್ತ ಸಾಲಿನಲ್ಲಿ 11,59,760 ರೂ.ಗಳ ಆಕ್ಷೇಪಣೆ ಮೊತ್ತವಾಗಿದ್ದು, ಎದುರುದಾರ ಸರ್ಕಾರಿ ಅಧಿಕಾರಿಯಾಗಿದ್ದು, ಸದರಿ ಸಂಪೂರ್ಣ ಜವಾಬ್ದಾರಿಯು ಎದುರುದಾರರದ್ದಾಗಿರುತ್ತದೆ. ಎದುರುದಾರರು ಅತಿ ಅವಶ್ಯಕವಾಗಿ ಬಿಲ್ಲು ಪಾವತಿ ಮಾಡಬೇಕಾಗಿರುವುದರಿಂದ ವರ್ಗ-1 ಕ್ಕೆ ಹಣವನ್ನು ದಿ.31/03/2017 ಕ್ಕೆ ವರ್ಗಾಯಿಸಿಕೊಂಡಿರುವುದು, ಇದರ ಬಗ್ಗೆ ಸಮರ್ಥಿಸಿಕೊಂಡಿರುವುದು ಸರಿ ಇರುವುದಿಲ್ಲ. ಏಕೆಂದರೆ, ಕೊನೆಯ ಶುಲ್ಕ ಖಾತೆಯಲ್ಲಿದ್ದು, ಅದನ್ನು ಮಾತ್ರ ಬಳಸಿಕೊಳ್ಳಬಹುದಾಗಿರುತ್ತದೆ.

14. ಎದುರುದಾರ ತನ್ನ ಆಕ್ಷೇಪಣೆಯಲ್ಲಿ ಸರ್ವ ಸದಸ್ಯರು ನಿರ್ಣಯ ಕೈಗೊಂಡು ವರ್ಗ-1 ಕ್ಕೆ ಹಣ ವರ್ಗಾಯಿಸಬಹುದು ಎಂದು ಠರಾವು ಆಗಿರುತ್ತದೆ ಎಂದು ಸಲ್ಲಿಸಿರುವ ಠರಾವಿನ ದಾಖಲೆಯನ್ನು ನೋಡಿದಾಗ ಯಾರೇ ಸರ್ವಸದಸ್ಯರು ಸಹಿ ಮಾಡಿರುವುದು ಕಂಡುಬರುವುದಿಲ್ಲ. ಆದರೆ ಅಧ್ಯಕ್ಷರೊಬ್ಬರೇ ಸಹಿ ಮಾಡಿದ್ದು ಎದುರುದಾರನ ಸಹಿ ಸಹ ಇರುವುದಿಲ್ಲ. ಇದರಿಂದ ದೂರುದಾರರು ಅಪಾದಿಸಿದಂತೆ 1 ನಿಯಮಗಳನ್ನು ಉಲ್ಲಂಘಿಸಿ 1ನೇ ಎದುರುದಾರನು ಹಣ ವರ್ಗಾವಣೆ ಮಾಡಲಾಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಎದುರುದಾರ 1 ಇವರು ತನ್ನ ಅಧಿಕಾರವಧಿಯಲ್ಲಿ ದುರ್ನಡತೆ ಹಾಗೂ ಕರ್ತವ್ಯಲೋಪವೆಸಗಿ ಸರ್ಕಾರಕ್ಕೆ ಆರ್ಥಿಕ ನಷ್ಟವುಂಟುಮಾಡಿರುವುದು ಮೇಲ್ಕಂಡ ಅಂಶಗಳಿಂದ ಕಂಡುಬರುತ್ತಿರುವುದರಿಂದ ಎದುರುದಾರ-1 ಇವರ ವಿರುದ್ಧ ಕರ್ನಾಟಕ ಲೋಕಾಯುಕ್ತ ಕಾಯಿದೆ 12(3) ರಂತೆ ಕ್ರಮ ಜರುಗಿಸಬಹುದಾಗಿರುತ್ತದೆ.

15. 2 ನೇ ಎದುರುದಾರನು ಆಕ್ಷೇಪಣೆಯಲ್ಲಿ ತನ್ನ ಪಾತ್ರ ಇರುವುದಿಲ್ಲವೆಂದು ಸಲ್ಲಿಸಿದ್ದು ಆದ್ದರಿಂದ ದಾಖಲೆಗಳೊಂದಿಗೆ ಪರಿಶೀಲಿಸಿದ್ದು, 2ನೇ ಎದುರುದಾರನ ಕರ್ತವ್ಯಲೋಪ ಕಂಡುಬರುವುದಿಲ್ಲ.

16. ಮೇಲೆ ಚರ್ಚಿಸಲಾದ ಕಾರಣಗಳ ಹಿನ್ನಲೆಯಲ್ಲಿ ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966ರ ನಿಯಮಗಳು 3(1) (i) ರಿಂದ (iii) ರನ್ವಯ **1ನೇ ಎದುರುದಾರರಾದ** ಶ್ರೀ ಸುಭಾಸ್ ಖಾರ್ವಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಐರೋಡಿ ಗ್ರಾಮ ಪಂಚಾಯತ್ ಇವರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು "ಉಪಲೋಕಾಯುಕ್ತರಿಗೆ" ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

17. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ಈ ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ <u>ಮೂರು ತಿಂಗಳೊಳಗಾಗಿ</u> ಈ ಪ್ರಾಧಿಕಾರಕ್ಕೆ ವರದಿ ಮಾಡಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿದೆ.

24/12/20

**[ನ್ಯಾಯಮೂರ್ತಿ ಬಿ.ಎಸ್. ಪಾಟೀಲ]**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ, ಬೆಂಗಳೂರು.**